ಓ ಎಸ್ ನಂ.53/2023
ಡಿ.ಡಬ್ಲ್ಯೂ-1 ರವೀಂದ್ರ ತಂದೆ ಸಾತಲಿಂಗಪ್ಪ

**(ಇಂದು ದಿನಾಂಕಃ 17-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲು : ಶ್ರೀ ಎಂ ಬಿ ಪಿ ವಕೀಲರಿಂದ.

ಸರ್ವೆ ನಂಬರ ೩೬/೧ ರ ಒಟ್ಟು ವಿಸ್ತೀರ್ಣ ೧೪ ಎಕರೆ ೧೧ ಗುಂಟೆ ಜಮೀನು ಇದೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸರ್ವೆ ನಂಬರ ೩೬/೧ ರಲ್ಲಿ ನನ್ನ ಹೆಸರಿನಲ್ಲಿರುವ ೪ ಎಕರೆ ೩೪ ಗುಂಟೆ ಜಮೀನು ಮತ್ತು ೪ನೇ ಪ್ರತಿವಾದಿ ಹೆಸರಿನಲ್ಲಿರುವ ೪ ಎಕರೆ ೩೪ ಗುಂಟೆ ಜಮೀನು ಮಾತ್ರ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಸರ್ವೆ ನಂಬರ ೩೬/೧ ರ ಜಮೀನು ಕೂಡಾ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿ ೧/೭ ಪಾಲಿಗೆ ಹಕ್ಕುದಾರ ಇರುತ್ತಾರೆ ಎಂದರೆ ಸಾಕ್ಷಿಯು ೧/೬ ಹಕ್ಕುದಾರ ಇರುತ್ತಾರೆ ನಮ್ಮ ಅಕ್ಕ ಯಾವುದೇ ಪಾಲು ಕೇಳಿಲ್ಲ ಎನ್ನುತ್ತಾರೆ. ನಮ್ಮ ಅಕ್ಕರವರಿಗೂ ಕೂಡಾ ೧ ಪಾಲು ದಾವಾ ಆಸ್ತಿಗಳಲ್ಲಿ ಇದೆ ಎಂದರೆ ಸರಿ. ಅವರವರ ಪಾಲು ತೆಗೆದುಕೊಳ್ಳಲು ನನ್ನ ತಕರಾರು ಇಲ್ಲ ಎಂದರೆ ಸಾಕ್ಷಿಯು ಈಗಾಗಲೇ ಪಾಲು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ.

೨. ನನ್ನ ಸಹೋದರಿ ಯಾವುದೇ ಪಾಲು ದಾವಾ ಆಸ್ತಿಗಳಲ್ಲಿ ತೆಗೆದುಕೊಂಡಿರುವುದಿಲ್ಲ. ಪಹಣಿಗಳಲ್ಲಿ ನಮ್ಮ ತಂದೆಯವರು ನಮೂದಿಸಿದ ಮೇರೆಗೆ ನಮ್ಮ ಹೆಸರುಗಳು ಬಂದಿರುತ್ತವೆ. ನಮ್ಮ ನಡುವೆ ಯಾವುದೇ ವಿಭಾಗ ಪತ್ರ, ನ್ಯಾಯಾಲಯದ ಡಿಕ್ರಿ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ಮುಟೇಷನ್ ಆಗಿರುತ್ತದೆ ಎನ್ನುತ್ತಾರೆ. ಸರ್ವೆ ನಂಬರ ೧೧೭/೫ ರ ಜಮೀನಿಗೆ ವಾದ ಪತ್ರದಲ್ಲಿ ತೋರಿಸಿದ ಚೆಕ್ಕುಬಂದಿ ಸರಿಯಾಗಿರುತ್ತದೆ. ಸಾಕ್ಷಿಯು ಸ್ಥಳದಲ್ಲಿ ಸದರಿ ಚೆಕ್ಕುಬಂದಿಗಳು ಇರುವುದಿಲ್ಲ ಎನ್ನುತ್ತಾರೆ. ನಾನು ವಾದಿ

ಪರಮೇಶ್ವರರವರಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟ ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ಕರಾರು ಪತ್ರ ಆದಾಗ ಅಂದರೆ ೨೦೧೯-೨೦ ರಲ್ಲಿ ನಾನು ಸದರಿ ದಾಖಲೆಯನ್ನು ನೋಡಿರುತ್ತೇನೆ. ಹದಿಮೂರು ಲಕ್ಷ ಮೂವತ್ತು ಸಾವಿರ ರೂಪಾಯಿಗೆ ಸದರಿ ಕರಾರು ಆಗಿರುತ್ತದೆ. ಸದರಿ ಕರಾರು ಪತ್ರದ ಆಸ್ತಿಯ ಚೆಕ್ಕುಬಂದಿಯನ್ನು ನಾನು ನೋಡಿರುತ್ತೇನೆ.

೩. ವಾದಪತ್ರದಲ್ಲಿ ತೋರಿಸಿದ ಸರ್ವೆ ನಂಬರ ೧೧೭/೫ ರ ಚೆಕ್ಕುಬಂದಿಯನ್ನು ಕರಾರು ಪತ್ರದಲ್ಲಿ ನಮೂದಿಸಲಾಗಿದೆ, ಆದರೆ ಸ್ಥಳದಲ್ಲಿ ಸದರಿ ಚೆಕ್ಕುಬಂದಿ ಇರುವುದಿಲ್ಲ. ಖರೀದಿ ಪತ್ರ ಮಾಡಿಕೊಡುವ ಸಮಯವನ್ನು ನಿಗದಿಪಡಿಸಲಾಗಿದೆ, ಅದು ಎಷ್ಟು ಎಂದು ನನಗೆ ಹೇಳಲು ಗೊತ್ತಿಲ್ಲ. ಸದರಿ ಖರೀದಿ ಕರಾರುಪತ್ರದ ಆಧಾರದ ಮೇಲೆ ಖರೀದಿ ಪತ್ರ ಆಗಿರುವುದಿಲ್ಲ. ಸರ್ವೆ ನಂಬರ ೧೧೭ ರ ಯಾವ ಭಾಗದ ಜಮೀನು ಖರೀದಿ ನೀಡುವುದಾಗಿ ಸದರಿ ಕರಾರು ಪತ್ರದಲ್ಲಿ ಬರೆದಿರುವುದಿಲ್ಲ. ಸರ್ವೆ ನಂಬರ ೧೧೭/೫ ರ ೧೫ ಎಕರೆ ೨ ಗುಂಟೆ ಜಮೀನಿನಲ್ಲಿ ವಾದಿ ತಮ್ಮ ಹಿಸ್ಸೆಗೆ ಬರುವ ಜಮೀನನ್ನು ಖರೀದಿ ನೀಡಲು ಕರಾರುಪತ್ರ ಮಾಡಿರುತ್ತಾರೆ ಎಂದರೆ ಸರಿ. ನಾವು ಜಮೀನು ವಿಭಾಗ ಮಾಡಿ ಕೊಡದ ಕಾರಣ ಇಲ್ಲಿಯವರೆಗೆ ಖರೀದಿ ಪತ್ರ ಆಗಿಲ್ಲ ಎಂದರೆ ಸಾಕ್ಷಿಯು ಜಮೀನು ವಿಭಾಗ ಆಗಿರುತ್ತದೆ ಎನ್ನುತ್ತಾರೆ. ವಿಭಾಗ ಆಗಿದ್ದರೂ ಖರೀದಿ ಪತ್ರ ಆಗಿಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆದಿದೆಯೇ ಎಂದರೆ ಸಾಕ್ಷಿಯು ಆ ರೀತಿ ಬರೆದಿಲ್ಲ, ಆದರೆ ವಾದಿಯೇ ನಮಗೆ ವಿಭಾಗ ಮಾಡಿ ಕೊಟ್ಟಿರುತ್ತಾರೆ ಎನ್ನುತ್ತಾರೆ.

೪. ಮೊದಲು ನಮ್ಮ ತಂದೆ ಎಲ್ಲರ ಹತ್ತಿರ ಇದ್ದರು ಎಂದರೆ ಸಾಕ್ಷಿಯು ಮೊದಲಿನಿಂದಲೂ ನನ್ನ ಹತ್ತಿರವೇ ಇರುತ್ತಾರೆ ಎನ್ನುತ್ತಾರೆ. ಈಗ ನಮ್ಮ ತಂದೆ ನನ್ನ

ಹತ್ತಿರವೆ ವಾಸವಿರುತ್ತಾರೆ. ಸರ್ವೆ ನಂಬರ ೨೪/೨ ರ ಜಮೀನು ನಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಜಮೀನು ನಾನು ಹೊಡೆಯಬೇಕು ಎಂಬ ಉದ್ದೇಶದಿಂದ ನಮ್ಮ ನಡುವೆ ವಿಭಾಗ ಆಗಿದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿಚಾರಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ನನ್ನ ಹತ್ತಿರ ಇದ್ದುದರಿಂದ ಅವರ ಹೆಸರಿನಲ್ಲಿ ಇರುವ ಆಸ್ತಿ ಹೊಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.